ಯಾವ ದಾಸನ ಪಾದಗಳು ಅಲ್ಲಾಹನ ಮಾರ್ಗದಲ್ಲಿ ಧೂಳಿನಿಂದ ಮುಚ್ಚಿಹೋಗುತ್ತವೆಯೋ, ಆ ಪಾದಗಳನ್ನು ನರಕದ ಬೆಂಕಿ ಸ್ಪರ್ಶಿಸುವುದಿಲ್ಲ

ಅಬೂ ಅಬ್ಸ್ ಅಬ್ದುರ್ರಹ್ಮಾನ್ ಬಿನ್ ಜಬ್ರ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾವ
ದಾಸನ ಪಾದಗಳು ಅಲ್ಲಾಹನ ಮಾರ್ಗದಲ್ಲಿ ಧೂಳಿನಿಂದ ಮುಚ್ಚಿಹೋಗುತ್ತವೆಯೋ, ಆ ಪಾದಗಳನ್ನು
ನರಕದ ಬೆಂಕಿ ಸ್ಪರ್ಶಿಸುವುದಿಲ್ಲ."
[صحيح] [رواه البخاري]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ನೀಡುತ್ತಿರುವ ಶುಭಸುದ್ದಿಯೇನೆಂದರೆ, ಯಾರ ಪಾದಗಳು ಅಲ್ಲಾಹನ ಮಾರ್ಗದಲ್ಲಿ ಹೋರಾಡುವಾಗ ಧೂಳಿನಿಂದ ಮುಚ್ಚಲ್ಪಡುತ್ತವೆಯೋ, ಅವರನ್ನು ನರಕದ ಬೆಂಕಿ ಸ್ಪರ್ಶಿಸುವುದಿಲ್ಲ.

http://www.sunnah.global/hadeeth/kn/show/3868